# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 186 (266) |
| ಸದಸ್ಯರ ಹೆಸರು | : | ಶ್ರೀ. ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 09.12.2025. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರದೇಶಗಳ ಒಟ್ಟು ವಿಸ್ತೀರ್ಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರದೇಶಗಳ ವಿಸ್ತೀರ್ಣ 6.01 ಲಕ್ಷ ಹೆಕ್ಟೇರ್ ಗಳಿರುತ್ತದೆ.<br>ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ. |
| ಆ) | ಇತ್ತೀಚಿನ ದಿನಗಳಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಮುಂತಾದ ಹವಾಮಾನ ವೈಪರೀತ್ಯದಿಂದಾಗಿ ತೆಂಗು ಬೆಳೆಗಾರರು ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಂಗು ಬೆಳೆಗಾರರನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬಂದಿದೆ.<br><br>**ತೆಂಗು ಬೆಳೆಗಾರರನ್ನು ಪ್ರೋತ್ಸಾಹಿಸಲು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ:**<br><br>1. ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆ ಕಾರ್ಯಕ್ರಮ: ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆಗಾಗಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/- ಗಳನ್ನು ನೀಡಲಾಗುತ್ತಿದೆ. ಮೊದಲನೇ ವರ್ಷ ರೂ.45,250/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ ರೂ.8,750/ ಗಳ ಸಹಾಯಧನವನ್ನು ನೀಡಲಾಗುತ್ತಿದೆ. 2023-24 ನೇ ಸಾಲಿನಲ್ಲಿ 2423.50 ಹೆಕ್ಟೇರ್ ಗಳಿಗೆ ಮೊದಲನೇ ವರ್ಷದ ಕಾರ್ಯಕ್ರಮಕ್ಕಾಗಿ ರೂ. 951.19 ಲಕ್ಷಗಳನ್ನು 4571 ಫಲಾನುಭವಿಗಳಿಗೆ ನೀಡಲಾಗಿದೆ.<br><br>2. ಈ ಪ್ರದೇಶದ ನಿರ್ವಹಣೆಗಾಗಿ 2025-26 ನೇ ಸಾಲಿನಲ್ಲಿ ರೂ.186.04 ಲಕ್ಷಗಳನ್ನು ವಿನಿಯೋಗಿಸಲಾಗಿದೆ.<br><br>3. 2025-26ನೇ ಸಾಲಿನಲ್ಲಿ ಹೊಸದಾಗಿ ಮೊದಲನೆ ವರ್ಷದ ಕಾರ್ಯಕ್ರಮಕ್ಕಾಗಿ 1000 ಹೆಕ್ಟೇರ್ ವಿಸ್ತೀರ್ಣದ ಗುರಿ ಹಮ್ಮಿಕೊಳ್ಳಲಾಗಿದ್ದು, ರೂ.452.50 ಲಕ್ಷಗಳ ಅನುದಾನ ನಿಗದಿಯಾಗಿದೆ, ಕಾರ್ಯಕ್ರಮ ಅನುಷ್ಠಾನದಲ್ಲಿದೆ.<br><br>4. **ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕಾರ್ಯಕ್ರಮ:** ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆಗಾಗಿ ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 |

ವರ್ಷಗಳ ಅವಧಿಗೆ, ಮೊದಲನೇ ವರ್ಷ ರೂ.17500/- ಗಳು ಮತ್ತು ಎರಡನೇ ವರ್ಷದಲ್ಲಿ ರೂ.17500/- ಗಳಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಛಗಳಲ್ಲಿ (Clusters) ಆಯ್ಕೆ ಮಾಡಿ ಸಹಾಯಧನ ನೀಡಲಾಗಿರುತ್ತದೆ. 2023-24 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ರೂ. 5000 ಲಕ್ಷಗಳನ್ನು ವಿನಿಯೋಗಿಸಿ 28420 ಹೆಕ್ಟೇರ್ ಗಳಲ್ಲಿ 41185 ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದೆ.

5. 2025-26ನೇ ಸಾಲಿನಲ್ಲಿ ಈ ಪ್ರದೇಶದ ನಿರ್ವಹಣೆಗಾಗಿ ರೂ.4973.45 ಲಕ್ಷಗಳ ಅನುದಾನ ವಿನಿಯೋಗಿಸಲಾಗುತ್ತಿದೆ.

6. ತೆಂಗು ಬೆಳೆಯಲ್ಲಿ ಕಂಡು ಬರುವ ಕಪ್ಪುತಲೆಹುಳು ಹಾಗೂ ಬಿಳಿನೊಣ ಕೀಟಗಳ ನಿಯಂತ್ರಣಕ್ಕಾಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 23 ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಎಂಬ ಪರೋಪಜೀವಿಗಳು ಹಾಗೂ ಐಸಿರಿಯಾ ಜೈವಿಕ ಕೀಟನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಈವರೆವಿಗೂ 75.64 ಲಕ್ಷ ಸಂಖ್ಯೆಯ ಪರೋಪ ಜೀವಿಗಳನ್ನು ಹಾಗೂ 1839.70 ಲೀ. ಐಸಿರಿಯಾ ಜೈವಿಕ ಕೀಟನಾಶಕವನ್ನು ಉತ್ಪಾದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ.

7. ಕಪ್ಪುತಲೆಹುಳುವಿನ ನಿಯಂತ್ರಣಕ್ಕಾಗಿ ಇಲಾಖಾ ಪ್ರಯೋಗಶಾಲೆಗಳಲ್ಲಿ ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲು ರೂ.50.00 ಲಕ್ಷಗಳ ಹೆಚ್ಚುವರಿ ಅನುದಾನ ನೀಡುವಂತೆ ಕೇಂದ್ರೀಯ ತೆಂಗು ಅಭಿವೃದ್ಧಿ ಮಂಡಳಿ, ಕೊಚ್ಚಿ ಕೇರಳ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

8. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ತೆಂಗು ಸೇರಿದಂತೆ ವಿವಿಧ ತೋಟಗಾರಿಕಾ ಬೆಳೆಗಳಿಗೆ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ಘಟಕ ವೆಚ್ಚ ರೂ. 10000/- ಗಳಲ್ಲಿ ಶೇ.75ರಂತೆ ಸಾಮಾನ್ಯ ವರ್ಗದ ರೈತರಿಗೆ ರೂ.7500ಗಳನ್ನು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಂತೆ ರೂ.9000/- ಗಳ ಸಹಾಯಧನ ನೀಡಲಾಗುತ್ತಿದೆ.

9. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೆಂಗು ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ರೂ.5000/- ಪ್ರತಿ ಹೆಕ್ಟೇರ್ ಘಟಕ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1500 ರಂತೆ 2ಹೆಕ್ಟೇರ್ ರವರೆಗೆ ರೂ.3000/-ಗಳ ಸಹಾಯಧನ ನೀಡಲಾಗುತ್ತಿದೆ.

| | | |
|---|---|---|
| | | 10. ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿಯಲ್ಲಿ ತೆಂಗು ಶೇಖರಣಾ ಘಟಕಗಳನ್ನು ನಿರ್ಮಿಸಲು ಪ್ರತಿ ಘಟಕದ ವೆಚ್ಚ ರೂ.87500 /- ರಂತೆ ಸಹಾಯಧನ ನೀಡಲಾಗುತ್ತಿದೆ. 2025-26 ನೇ ಸಾಲಿನಲ್ಲಿ 245 ಘಟಕಗಳ ಭೌತಿಕ ಗುರಿ ಮತ್ತು ರೂ.2.14 ಕೋಟಿಗಳ ಆರ್ಥಿಕ ಗುರಿ ನಿಗಧಿಪಡಿಸಿದ್ದು, ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.<br><br>11. ದಿನಾಂಕ: 31.07.2025 ಹಾಗೂ 01.08.2025 ರಂದು ತಜ್ಞರು, Central Plantation Crops Research Institute (CPCRI) ಕಾಸರಗೋಡು, ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯ ತಜ್ಞರು, CDB ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳಿಂದ ತೆಂಗು ಬೆಳೆಯಲ್ಲಿ ಕಂಡು ಬರುವ ರೋಗ / ಕೀಟಗಳಿಗೆ ಹಾನಿಗೊಳಗಾದ ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ರೈತರ ತಾಕುಗಳಲ್ಲಿ ಅರಿವು ಮೂಡಿಸಲು ಪ್ರಾತ್ಯಕ್ಷತೆ / ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>12. ತೆಂಗಿನ ಬೆಳೆಯಲ್ಲಿ ಕಂಡು ಬರುವ ರೋಗ/ಕೀಟಗಳ ಹತೋಟಿ ಕ್ರಮಗಳ ಕುರಿತು ಅರಿವು ಮೂಡಿಸಲು ವಿಷಯ ತಜ್ಞರು, ತೋಟಗಾರಿಕಾ ವಿಜ್ಞಾನಗಳ ವಿಶ್ವ ವಿದ್ಯಾಲಯ, ತಜ್ಞರು, ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (CPCRI), ಕಾಸರಗೋಡು ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ ಸಹಯೋಗದೊಂದಿಗೆ 12500 ರೈತರಿಗೆ 85 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.<br><br>13. ಕೇಂದ್ರ ಸರ್ಕಾರದ ವತಿಯಿಂದ ನಿರ್ದೇಶಕರು, CPCRI, ಕಾಸರಗೋಡು ರವರ ಅಧ್ಯಕ್ಷತೆಯಲ್ಲಿ ವೈಜ್ಞಾನಿಕ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:11.11.2025 ರಂದು ನಿರ್ದೇಶಕರು ಹಾಗೂ ಅಧಿಕಾರಿಗಳು ತೋಟಗಾರಿಕೆ ಇಲಾಖೆ ರವರ ಸಭೆಯನ್ನು ಜೈವಿಕ ಕೀಟನಾಶಕಗಳು ಹಾಗೂ ಅಲ್ಪಾವಧಿ ಹಾಗೂ ದೀರ್ಘಾವಧಿಗಳಲ್ಲಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಕುರಿತು ವಿಶೇಷ ಪ್ಯಾಕೇಜ್ ನೀಡಲು ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. ಅದರಂತೆ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. |
| ಇ) | ಹವಾಮಾನ ವೈಪರೀತ್ಯದಿಂದ (ಗಾಳಿ, ಸಿಡಿಲು ಇತ್ಯಾದಿ) ತೆಂಗಿನಮರವನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡಲಾಗುತ್ತಿದೆಯೇ; ಪ್ರತಿ | ಹೌದು, ನೀಡಲಾಗುತ್ತಿದೆ.<br><br>ಹಾನಿಯಾದ ಬೆಳೆಗಳಿಗೆ ಪ್ರತಿ ರೈತರಿಗೆ 2.00 ಹೆಕ್ಟೇರ್ ವರೆಗೆ ಈ ಕೆಳಕಂಡಂತೆ ಪರಿಹಾರವನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದ ಮೂಲಕ ವಿತರಿಸಲಾಗುತ್ತದೆ. |

| | | |
|---|---|---|
| | ಮರಕ್ಕೆ ಎಷ್ಟು ಪರಿಹಾರ ನೀಡಲಾಗುತ್ತಿದೆ; | <table><tr><th>ವರ್ಗ</th><th>ಕೇಂದ್ರ ಸರ್ಕಾರದ NRDF/ SDRF ಮಾರ್ಗಸೂಚಿ ಯನ್ವಯ Input subsidy ದರ (ರೂ. ಪ್ರತಿ ಹೆಕ್ಟೇರ್ ಗೆ)</th><th>ರಾಜ್ಯ ಸರ್ಕಾರದಿಂದ ಹೆಚ್ಚಿಸಿರುವ Input subsidy ದರ (ರೂ. ಪ್ರತಿ ಹೆಕ್ಟೇರ್ ಗೆ)</th><th>ಒಟ್ಟು Input subsidy ದರ (ರೂ. ಪ್ರತಿ ಹೆಕ್ಟೇರ್ ಗೆ)</th></tr><tr><td>ಬಹುವಾರ್ಷಿಕ</td><td>22500/-</td><td>8500/-</td><td>31000/-</td></tr></table> |
| ಈ) | ಇತರ ತೋಟಗಾರಿಕಾ ಬೆಳೆಗಳಂತೆ ತೆಂಗು ಬೆಳೆಯನ್ನು ಹವಾಮಾನ ಆಧಾರಿತ ವಿಮಾ ಯೋಜನೆಗೆ ಒಳಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; | ತೆಂಗು ಅಭಿವೃದ್ಧಿ ಮಂಡಳಿಯ ತೆಂಗು ಮರ ವಿಮಾ ಯೋಜನೆ (Coconut Palm Insurance Scheme) ಇರುವ ಹಿನ್ನಲೆಯಲ್ಲಿ ಹವಾಮಾನ ಆಧಾರಿತ ವಿಮಾ ಯೋಜನೆಯಡಿ (Restrured Weather Based Crop Insurance Scheme) ತೆಂಗು ಬೆಳೆಯನ್ನು ಒಳಪಡಿಸಲಾಗಿರುವುದಿಲ್ಲ. |
| ಉ) | ವಿಮಾ ಸೇರ್ಪಡೆ ಬಗ್ಗೆ ಸರಕಾರಕ್ಕೆ ಈವರೆಗೆ ಯಾವುದಾದರೂ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ;<br>ಸಲ್ಲಿಕೆಯಾಗಿದ್ದರೆ ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು; | ವಿಮೆ ಸೇರ್ಪಡೆ ಬಗ್ಗೆ ಪ್ರಸ್ತಾವನೆ ಸಲ್ಲಿಕೆಯಾಗಿದೆ. ವಿವರ ಕೆಳಗಿನಂತಿದೆ.<br>ತೆಂಗು ಮರ ವಿಮಾ ಯೋಜನೆಯಡಿ ಪ್ರತಿಯೊಂದು ಮರವನ್ನು ಒಳಪಡಿಸಲಾಗಿರುತ್ತದೆ. ಆದರೆ ಹವಾಮಾನ ಆಧಾರಿತ ವಿಮಾ ಯೋಜನೆಯಡಿ ತೆಂಗು ಬೆಳೆಯ ವಿಸ್ತೀರ್ಣವನ್ನು ಪರಿಗಣಿಸಲಾಗುವುದು. ಆದುದರಿಂದ ಹವಾಮಾನ ಆಧಾರಿತ ವಿಮಾ ಯೋಜನೆಯ ಅನುಷ್ಠಾನವು ಸರಳವಾಗಿದೆ. ಈ ಹಿನ್ನಲೆಯಲ್ಲಿ ತೆಂಗು ಬೆಳೆಯನ್ನು ಹವಾಮಾನ ಆಧಾರಿತ ವಿಮಾ ಯೋಜನೆಯಡಿ ಸೇರ್ಪಡಿಸಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ. |
| ಊ) | ತೆಂಗು ಬೆಳೆಯನ್ನು ಪ್ರಾಣಿಗಳು ನಾಶಪಡಿಸಿದಾಗ ಸಂತ್ರಸ್ತ ರೈತರಿಗೆ ಪರಿಹಾರ ನೀಡಲಾಗುತ್ತಿದೆಯೇ; ರೈತರ ಬೆಳೆ ನಾಶಕ್ಕೆ ಪರಿಹಾರ ನೀಡುವ ಬಗ್ಗೆ ಸರ್ಕಾರದ ನಿಲುವೇನು; | ತೆಂಗು ಬೆಳೆಯನ್ನು ಪ್ರಾಣಿಗಳು ನಾಶಪಡಿಸಿದಾಗ ಸಂತ್ರಸ್ತ ರೈತರಿಗೆ ಪರಿಹಾರ ನೀಡುವ ಕಾರ್ಯಕ್ರಮ ತೋಟಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ. |

| | | |
|---|---|---|
| ಋ) | ರಬ್ಬರ್ ಬೆಳೆಯನ್ನು ತೋಟಗಾರಿಕಾ ಇಲಾಖೆಯಡಿ ಒಳಪಡಿಸಿ ಸದರಿ ಬೆಳೆಗೆ ಕನಿಷ್ಟ ಪ್ರೋತ್ಸಾಹಧನ ನೀಡಲು ಮತ್ತು ಹವಾಮಾನ ಆಧರಿತ ವಿಮಾ ಯೋಜನೆ ಅಡಿ ಅಳವಡಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | ರಬ್ಬರ್ ಬೆಳೆಯು ಕೇಂದ್ರ ಸರ್ಕಾರದ ರಬ್ಬರ್ ಮಂಡಳಿ ವ್ಯಾಪ್ತಿಗೆ ಬರುವುದರಿಂದ, ರಬ್ಬರ್ ಬೆಳೆಯನ್ನು ಹವಾಮಾನ ಆಧಾರಿತ ವಿಮಾ ಯೋಜನೆ ಅಡಿ ಅಳವಡಿಸುವ ಪ್ರಸ್ತಾವನೆಯು ರಾಜ್ಯ ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: HORTI 520 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

LCQ 186 (266)

# ಅನುಬಂಧ

(ತೆಂಗು ಬೆಳೆಯ ವಿಸ್ತೀರ್ಣ 2024-25 3rd estimate)

| ಕ್ರ. ಸಂ. | ಜಿಲ್ಲೆಗಳು | ವಿಸ್ತೀರ್ಣ (ಹೆ.) |
|---|---|---|
| 1. | ಬೆಂಗಳೂರು (ಗ್ರಾ.) | 2511 |
| 2. | ದಾರವಾಡ | 114 |
| 3. | ಹಾಸನ | 116932 |
| 4. | ಕಲಬುರ್ಗಿ | 24 |
| 5. | ಕೋಲಾರ | 932 |
| 6. | ಕೊಪ್ಪಳ | 204 |
| 7. | ಮಂಡ್ಯ | 74735 |
| 8. | ಮೈಸೂರು | 20584 |
| 9. | ಶಿವಮೊಗ್ಗ | 5642 |
| 10. | ತುಮಕೂರು | 179970 |
| 11. | ಯಾದಗಿರಿ | 18 |
| 12. | ದಾವಣಗೆರೆ | 6816 |
| 13. | ಬೆಳಗಾವಿ | 155 |
| 14. | ದಕ್ಷಿಣ ಕನ್ನಡ | 27603 |
| 15. | ಬಾಗಲಕೋಟೆ | 205 |
| 16. | ಬೆಂಗಳೂರು (ನಗರ) | 2068 |
| 17. | ಚಿಕ್ಕಬಳ್ಳಾಪುರ | 531 |
| 18. | ಚಿತ್ರದುರ್ಗ | 45570 |
| 19. | ವಿಜಯಪುರ | 29 |
| 20. | ಬೆಂಗಳೂರು ದಕ್ಷಿಣ | 27526 |
| 21. | ಗದಗ | 222 |
| 22. | ಹಾವೇರಿ | 641 |
| 23. | ಚಿಕ್ಕಮಗಳೂರು | 49729 |
| 24. | ಬಳ್ಳಾರಿ | 108 |
| 25. | ಉಡುಪಿ | 16252 |
| 26. | ಚಾಮರಾಜನಗರ | 12012 |
| 27. | ಉತ್ತರ ಕನ್ನಡ | 7683 |
| 28. | ಕೊಡಗು | 978 |
| 29. | ಬಿದರ್ | 30 |
| 30. | ವಿಜಯನಗರ | 830 |
| 31. | ರಾಯಚೂರು | 134 |
|  | ಒಟ್ಟು | **600788** |